ಹರಿಹರ ತಾಲ್ಲೂಕಿನ ದೇವರ ಬೆಳ್ಳಕೆರೆ ಬಳಿ ವಡ್ಡಿನಲ್ಲಿ ಹೆಚ್ಚು ನೀರಿನ ಶೇಖರಣೆ

೭೪೧. ಶ್ರೀ ಬಿ. ಜಿ. ಕೊಟ್ರಪ್ಪ (ಹರಿಹರ).—ಮಾನ್ಯ ಲೋಕೋಪಯೋಗಿ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ, ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

(ಅ) ಹರಿಹರ ತಾಲ್ಲೂಕಿನ ದೇವರ ಬಿಳಿಕೆರೆ ಬಳಿ ಕಟ್ಟಿರುವ ವಡ್ಡಿನಲ್ಲಿ ಹೆಚ್ಚಾಗಿ ನೀರು ನಿಂತು ಸುತ್ತಲಿರುವ ಜಮೀನು ಮತ್ತು ತೆಂಗಿನ ತೋಟಗಳು ಮುಳುಗಡೆಯಾಗಿರುವುದರಿಂದ ಆ ಭಾಗದ ರೈತರಿಗೆ ತೊಂದರೆಯಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ ;

ಆ) ಹಾಗಿದ್ದಲ್ಲಿ, ಸದರಿ ಪ್ರದೇಶವನ್ನು ಸ್ವಾಧೀನಪಡಿಸಿಕೊಳ್ಳುವ ವಿಚಾರ ಯಾವ ಹಂತದಲ್ಲಿದೆ?

ಇ) ರೈತರು ತಮ್ಮ ಜಮೀನುಗಳಲ್ಲಿ ಫಸಲು ಪಡೆಯಲು ಸಾಧ್ಯವಿಲ್ಲವಾಗಿರುವುದರಿಂದ ಶೀಘ್ರವಾಗಿ ಸ್ವಾಧೀನಪಡಿಸಿಕೊಂಡು ಪರಿಹಾರ ಕೊಡಿಸಲು ಕ್ರಮ ತೆಗೆದುಕೊಳ್ಳಲಾಗುವುದು ?

ಶ್ರೀ ಹೆಚ್.ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು)—

ಅ) ಈ ವಿಷಯವು ಸರ್ಕಾರದ ಗಮನಕ್ಕೆ ಬಂದಿರುತ್ತೆ.

ಆ) ಮುಳುಗಡೆಯಾಗುವ ಪ್ರದೇಶವನ್ನು ಭೂ ಸ್ವಾಧೀನಪಡಿಸಿಕೊಳ್ಳುವ ವಿಸ್ತೀರ್ಣವನ್ನು ನಿರ್ಮಾನಿಸಲು ವಿವರವಾದ ಸರ್ವೆ ನಡೆಸಲಾಗುತ್ತಿದೆ.

ಇ) ಮುಳುಗಡೆಯಾಗುವ ಜಮೀನುಗಳ ವಿಸ್ತೀರ್ಣದ ನಿರ್ಮಾನವಾದ ಮೇಲೆ ಭೂ ಸ್ವಾಧೀನ ಪಡಿಸಿಕೊಂಡು ಅವರಿಗೆ ಪರಿಹಾರ ಕೊಡಲು ಸಾಧ್ಯವಾಗುತ್ತದೆ.

ಶ್ರೀ ಬಿ.ಜಿ. ಕೊಟ್ರಪ್ಪ.—ಮಾನ್ಯ ಅಧ್ಯಕ್ಷರೇ ದೇವರ ಬಿಳಿಕೆರೆ ಬಳಿ ವಡ್ಡು ಕಟ್ಟಿರುವುದರಿಂದ ಬೆಳೆ ನಾಶವಾಗುತ್ತಿರುತ್ತದೆ. ಕೊನೆಯ ಪಕ್ಷ ಸರ್ಕಾರದವರು ಅದನ್ನು ಆಕ್ವರ್ ಮಾಡಿ ತಮ್ಮ ಸ್ವಾಧೀನಕ್ಕೆ ತೆಗೆದುಕೊಳ್ಳುವವರೆಗೆ ಇದರಲ್ಲಿ ಜಮೀನನ್ನು ಕಳೆದುಕೊಂಡವರಿಗೆ ಕಾಂಪೆನ್ಸೇಷನ್ ಆದರೂ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಚ್.ಡಿ. ದೇವೇಗೌಡ.—ಮಾನ್ಯ ಅಧ್ಯಕ್ಷರೇ ಅದು ಯಾವ ಭೂಮಿ, ಸಾರ್ವಜನಿಕರ ಭೂಮಿಯಾಗಿದ್ದು ನಷ್ಟವಾಗಿದ್ದರೆ ಅಂಥವರಿಗೆ ಕಾಂಪೆನ್ಸೇಶನ್ ಕೊಡಲು ಎಷ್ಟು ಎಕರೆ ಬರಿಯಾ ಮುಳುಗಡೆಯಾಗಿದೆ ಎಂಬುದನ್ನು ಸರ್ವೆ ಮಾಡಬೇಕು. ಎಷ್ಟು ವಿಸ್ತೀರ್ಣ ಲುಕಿಸ್ಸಾಗಿದೆ ಎಂಬುದನ್ನು ಗೊತ್ತುಮಾಡಬೇಕು. ಇದಾದ ಮೇಲೆ ಯಾವ ಯಾವ ಸರ್ವೆ ನಂಬರಿನಲ್ಲಿ ಎಷ್ಟು ಭೂಮಿ ಮುಂತ್ತೆ ಅವರಿಗೆ ಆಗಿರತಕ್ಕಂಥ ಲಕ್ಸಾನು ಏನು ಎಂಬುದನ್ನು ತಿಳಿದುಕೊಂಡು ಸರಿಪಡಿಸುವುದಕ್ಕೆ ಮೊದಲು . ಅದು ಸರ್ಕಾರಿ ಭೂಮಿಯೇ ಆಥವಾ ಸಾರ್ವಜನಿಕರ ಭೂಮಿಯೇ ಎಂಬುದನ್ನು ನೋಡಿಕೊಳ್ಳಬೇಕಾಗುತ್ತದೆ, ಏತಕ್ಕೆಂದರೆ ಇವರು ಕೆರೆ ಅಂಗಳದಲ್ಲಿ ಒತ್ತುವರಿಮಾಡಿಕೊಂಡಿರಬಹುತ್ತಾರೆಯೇ ಎಂಬುದರ ಬಗ್ಗೆ ಮಾಹಿತಿಯನ್ನು ತರಿಸಿಕೊಂಡು ಸರ್ಕಾರ ಅನ್ಯಾಯವಾಗಿದ್ದರೆ ಅದನ್ನು ಸರಿಪಡಿಸಲಾಗುತ್ತದೆಂದು ಹೇಳುತ್ತೇನೆ.

ಶಹಾಪುರ ತಾಲ್ಲೂಕಿನ ಗೋಗಿಪೇಟೆ ಗೋಗಿ ಟೌನ್ ಮಧ್ಯದಲ್ಲಿರುವ ಸೇತುವೆಯ ನಿರ್ಮಾಣ

೧೧೩೦. ಶ್ರೀ ಶಿವಶೇಖರಪ್ಪಗೌಡ ಶಿರವಾಳ (ಶಹಾಪುರ) —ಮಾನ್ಯ ಲೋಕೋಪಯೋಗಿ, ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಶಹಾಪುರ ತಾಲ್ಲೂಕಿನ ಗೋಗಿಪೇಟೆ ಗೋಗಿ ಟೌನ್ ಮಧ್ಯದಲ್ಲಿರುವ ಸೇತುವೆ ಮಹಾಪುರದಲ್ಲಿ ಕೊಚ್ಚಿಕೊಂಡು ಹೋದ ಬಗ್ಗೆ ಸರ್ಕಾರದವರ ಗಮನಕ್ಕೆ ಬಂದಿದೆಯೇ:

ಆ) ಸದರಿ ಕಾಮಗಾರಿಗಾಗಿ ೧೯೮೫-೮೬ರಲ್ಲಿ ಹೊಸದಾಗಿ ಸಿಮೆಂಟ್ ಪೈಪುಗಳನ್ನು ಖರೀದಿ ಮಾಡಿದ್ದು ನಿಜವೆ?